

ನಿಸರ್ಗದ ಜೀವಪ್ರಭೇದಗಳಲ್ಲಿ ಅಚ್ಚರಿಗೊಳಿಸುವ ಹಲವು ರಚನೆಗಳಿವೆ. ಎಣಿಕೆಗೆ ನಿಲುಕದ ವಿಸ್ಮಯಗಳಿವೆ. ಆದಕ್ಕೆ ಸಸ್ಯಲೋಕವೂ ಹೊರತಲ್ಲ. ತಮ್ಮ ರೂಪ, ಗುಣವಿಶೇಷಣಗಳಿಂದಲೇ ವಿಚಿತ್ರವೆನಿಸುವ ಕೆಲವು ಸಸ್ಯಗಳ ಪರಿಚಯ ಇಲ್ಲಿದೆ...



**ಹೃದಯವಲ್ಲ, ಹೂವು**

ಸೈಬೀರಿಯಾ, ಉತ್ತರ ಚೀನಾ, ಕೊರಿಯಾ ಮತ್ತು ಜಪಾನ್ ದೇಶಗಳಲ್ಲಿ ಹೆಚ್ಚಾಗಿ ಕಂಡುಬರುವ ಈ ಸಸ್ಯದ ಹೆಸರು 'ಬ್ಲೀಡಿಂಗ್ ಹಾರ್ಟ್'. ಹೃದಯದಂಥ ರಚನೆಯಿಂದ ಗಮನಸೆಳೆಯುವ ಕಾರಣ ಈ ಹೆಸರು ಹೂವಿಗೆ ದಕ್ಕಿದೆ. ಹೃದಯದ ಆಕಾರದ ಹೂವು ಹಾಗೂ ಅದರ ಬಿಳಿ ಬಣ್ಣದ ತೆಳುವಾದ ತುದಿ, ನೀರ ಹನಿಯನ್ನೇ ಹೋಲುವ ಕಾರಣ 'ಬ್ಲೀಡಿಂಗ್ ಹಾರ್ಟ್' ಎಂದು ಕರೆಯಲಾಗಿದೆ. ಸಸ್ಯಶಾಸ್ತ್ರಜ್ಞ ರಾಬರ್ಟ್ ಫಾರ್ಚ್ಯೂನ್ ಇಂಗ್ಲೆಂಡ್‌ನಲ್ಲಿ 19ನೇ ಶತಮಾನದಲ್ಲಿ ಇದರ ಮೊದಲ ಮಾದರಿ ಪರಿಚಯಿಸಿದ್ದು. ವಸಂತ ಋತುವಿನಲ್ಲಿ ಈ ಹೃದಯದ ಹೂವುಗಳು ಅರಳಿ ನಿಲ್ಲುತ್ತವೆ.



**ಕಾರ್ಪ್ಸ್ ಫ್ಲವರ್**

ಗುಣದಲ್ಲಿ ಕ್ಯಾರಿಯನ್ ಸಸ್ಯವನ್ನೇ ಹೋಲುತ್ತದಾದರೂ ಆಕಾರದಲ್ಲಿ ಇದರದ್ದು ದೊಡ್ಡ ಹೂವು. 'ಕಾರ್ಪ್ಸ್ ಫ್ಲವರ್' ಎಂದು ಪ್ರಸಿದ್ಧವಾದ ಈ ಸಸ್ಯ ಕೂಡ ಕೊಳೆತ ವಾಸನೆ ಬೀರುತ್ತದೆ. ಮೊದಲ ಬಾರಿ ಇದರ ಹೂವು ಅರಳಲು ಏದರಿಂದ ಹತ್ತು ವರ್ಷ ತೆಗೆದುಕೊಳ್ಳುತ್ತದೆ. ಮತ್ತೆ ಅರಳಲು ಎರಡರಿಂದ ಹತ್ತು ವರ್ಷದವರೆಗೂ ಸಮಯ ತೆಗೆದುಕೊಳ್ಳಬಹುದು. ಹೀಗಾಗಿ ಇದರ ವಾಸನೆ ಆಘ್ರಾಣಕ್ಕೆ ಸಿಗುವುದು ಕೂಡ ವಿರಳವೇ. ಈ ಗಿಡ ಕವಲೊಡೆದ ಹೂಗೊಂಚಲನ್ನು ಹೊಂದಿದ್ದು, ಮೂರು ಮೀಟರ್ ಎತ್ತರ ಬೆಳೆಯಬಲ್ಲದು.



**ದುರ್ವಾಸನೆಯ ಆಕರ್ಷಣೆ**

ತಾಂಜೇನಿಯಾ ಹಾಗೂ ದಕ್ಷಿಣ ಆಫ್ರಿಕಾದ ಮರಳುಗಾಡು ಪ್ರದೇಶಗಳಲ್ಲಿ ಕಂಡುಬರುವ, ಹೂವು ಬಿಡುವ ಸಸ್ಯ ಇದಾಗಿದ್ದು, 'ಕ್ಯಾರಿಯನ್' (ಅಸಹ್ಯ) ಎಂದು ಕರೆಯಲಾಗುತ್ತದೆ. ಅತಿ ಕೊಳಕು ವಾಸನೆಯ ಕಾರಣವಾಗಿಯೇ ಗಿಡಕ್ಕೆ ಈ ಹೆಸರಿಡಲಾಗಿದೆ. ಕೊಳೆತ ಮಾಂಸದಂಥ ವಾಸನೆಯನ್ನು ಬಿಡುಗಡೆ ಮಾಡುವ ಮೂಲಕ ಕೀಟಗಳನ್ನು ತನ್ನತ್ತ ಸೆಳೆಯುವ ಹೂವಿನ ಗಿಡ ಇದಾಗಿದ್ದು, ಮನುಷ್ಯನ ಹಸಿವು ನಿಗ್ರಹಕ್ಕೆ ಈ ಸಸ್ಯವನ್ನು ಬಳಸಿಕೊಳ್ಳುವ ಕುರಿತು ವಿಜ್ಞಾನಿಗಳ ಸಂಶೋಧನೆ ಸಾಗಿದೆಯಂತೆ.